


**ವಿನ್ನೀ ಪೂಹಾ**
ಲೇ: ಎ. ಎ. ಮಿಲ್ನೆ
ಕನ್ನಡಕ್ಕೆ: ಆನಂದ ಪಾಟೀಲ
ಬೆಲೆ: ರೂ. 150




**ಸೂರಕ್ಕಿ ಗೇಟ್**
ಲೇ: ವಿಜಯಶ್ರೀ ಹಾಲಾಡಿ
ಬೆ: ರೂ. 75

ಎರಡೂ ಪುಸ್ತಕಗಳ ಪ್ರಕಟಣೆ: ಅಭಿನವ ಪ್ರಕಾಶನ, ಬೆಂಗಳೂರು.
ಮೊಬೈಲ್: 9448804905




**ಹಸಿರೂರಿನ ಹುಡುಗ**
ತಮ್ಮಣ್ಣ ಬೀಗಾರ
ಬೆಲೆ: ರೂ. 120
ಪ್ರ: ಬಂಡಾಯ ಪ್ರಕಾಶನ.
ಫೋನ್: 9448729359

ಕಾಡಂಚಿನ ಬುಡಕಟ್ಟು ಜನರ ಕಾಳಜಿ ನಮ್ಮದೆಂಬ ಜವಾಬ್ದಾರಿಯನ್ನು ಮಕ್ಕಳು ಅರಿಯುತ್ತಾರೆ. ಕಾಡಿನ ಮಧ್ಯೆ ಮನೆ, ತಟ್ಟಿ ಬಾಗಿಲು, ರಾತ್ರಿ ಕಳೆವ ಪ್ರಸಂಗ, ಅಮ್ಮ ಹೇಳುವ ಬೇಟೆಯ ಕಥೆ, ಕಾಡಿನ ಪ್ರಾಣಿಗಳ ವಿಚಿತ್ರ ಕೂಗು, ಇವುಗಳ ಮಧ್ಯದಲ್ಲಿ ಕಟ್ಟಿಕೊಟ್ಟ ಸನ್ನಿವೇಶಗಳು ಮಕ್ಕಳಿಗೆ ಸಹಜ ಪರಿಸರದ ಪಾಠವೂ ಆಗಿದೆ. ಪ್ರಾಣಿ, ಪಕ್ಷಿ, ಬೆಳದಿಂಗಳ ರಾತ್ರಿ, ಹರಿವ ನೀರು, ಮುಗಿಲು ಪೇಟೆ ಚಳಿ, ಮುಂತಾದ ಸಂಗತಿಗಳು ಸಹಜವಾಗಿ ಮುದ ನೀಡುವಂಥವು. ವಿಜಯಶ್ರೀ ಹಾಲಾಡಿ ಸೂರಕ್ಕಿ ಗೇಟ್ ಕಾದಂಬರಿಯಲ್ಲಿ ಪರಿಸರದ ಒಲವನ್ನು ಇಮ್ಮಡಿಸಿದ್ದಾರೆ.

## ಹಸಿರೂರಿನ ಹುಡುಗ

ತಮ್ಮಣ್ಣ ಬೀಗಾರರ ಬಾಲ್ಯದ ನೆನಪುಗಳ ಗದ್ಯ ಬರಹಗಳೇ 'ಹಸಿರೂರಿನ ಹುಡುಗ'. ಬಾಲ್ಯದ ನೆನಪುಗಳನ್ನು ಮಕ್ಕಳಿಗೆ ವಿಭಿನ್ನ ಶೈಲಿಯಲ್ಲಿ ಹೇಳಿರುವ ಈ ಕಥಾನಕ, ಮಕ್ಕಳ ಸಾಹಿತ್ಯದಲ್ಲಿ ಹೊಸ ಪ್ರಯತ್ನ. ಕುತೂಹಲವನ್ನು ಇಮ್ಮಡಿಸುವ ಬಾಲ್ಯದ ಬೇರೆ ಬೇರೆ ಸಂಗತಿಗಳ ಮೂಲಕ ಕಾಡಿನ ಪರಿಚಯವಾಗುತ್ತದೆ. ಬಯಲುಸೀಮೆಯ ಮಕ್ಕಳಿಗೂ ಕಾಡು ಸೆಳೆಯುತ್ತಾ ಹೋಗುತ್ತದೆ. ಶಾಲೆಗೆ ಹೋಗುವ ಕಾಡು ಬೆಟ್ಟದ ದಾರಿ, ಜೇಡರ ಬಲೆ, ಕಾಡು ಗುಬ್ಬಿ, ಬಾಳೆ ತೋಟ, ಬೆಳ್ಳಕ್ಕಿ, ಅದು ಬಾಳೆ ಎಲೆ ಮೇಲೆ ಹಾಕುವ ಬಿಳಿ ಹಿಕ್ಕೆ, ತಂದೆಗೆ ಬಾಳೆ ಎಲೆ ಹಾಳಾದ ಕೋಪ, ಬೆಳ್ಳಕ್ಕಿಯ ಉದ್ದನೆ ಕೊರಳು, ಇಷ್ಟುದ್ದ ಕಾಲು, ಇವೆಲ್ಲವುಗಳನ್ನು ಪರಿಚಯಿಸಿದ ರೀತಿಯೇ ವಿಶೇಷವಾಗಿದೆ.

ಬೆಳ್ಳಕ್ಕಿಯೊಂದನ್ನು ಯಾರೋ ನೆಲಕ್ಕೆ ಮೇಣ ಒತ್ತಿ ಹಿಡಿಯಲು ಹೊಂಚು ಹಾಕಿರುತ್ತಾರೆ. ಇವೆಲ್ಲ ಸಂಗತಿಗಳು ಕಥೆಗಳಲ್ಲ; ಲೇಖಕರ ಬಾಲ್ಯದಲ್ಲಿಯ ಘಟನಾವಳಿ. ಗದ್ಯದ ಬರಹದ ಶೈಲಿ ಓದಿಸಿಕೊಳ್ಳುತ್ತದೆ. ಐದು ದಶಕದ ಹಿಂದಿನ ತಮ್ಮ ಬಾಲ್ಯದ, ಕಾಡಿನ ಜೊತೆಗಿನ ಅನುಭವವನ್ನು ಇಂದಿನ ಬಾಲ್ಯದ ಮಕ್ಕಳು ಸವಿಯುವಂತೆ ಮಾಡಿದ್ದು ಸರ್ವಕಾಲಕ್ಕೂ ಆಪ್ತವಾಗುತ್ತದೆ.

●